# ದಿನಾಂಕ:31-07-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯ

## ವಿಷಯದ ಸಂಖ್ಯೆ : 01 (10)/2013-14

ಟಿಪ್ಪಣಿಯಲ್ಲಿ ವಿವರಿಸುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ರಸ್ತುತ ಸುಮಾರು 4000 ಮೆ.ಟನ್ ಘನತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ವಿಲೇವಾರಿ ಮಾಡುವುದು ಪಾಲಿಕೆಯ ಪ್ರಮುಖ ಜವಾಬ್ದಾರಿಯಾಗಿರುತ್ತದೆ. ಈ ನಿಟ್ಟಿನಲ್ಲಿ ಕೆಳಕಂಡ ಸ್ಥಳಗಳಲ್ಲಿ ಈಗಾಗಲೇ ಘಟಕಗಳನ್ನು ಸ್ಥಾಪಿಸಲಾಗಿದೆ.

1. ಮಾವಳ್ಳಿಪುರ – 600 ಮೆ.ಟನ್
2. ಮಂಡೂರು (ಉತ್ತರ) – 300 ಮೆ.ಟನ್
3. ಮಂಡೂರು (ದಕ್ಷಿಣ) – 1000 ಮೆ.ಟನ್
4. ಗುಂಡ್ಲಹಳ್ಳಿ – 1000 ಮೆ.ಟನ್
5. ಚೀಮಸಂದ್ರ – 300 ಮೆ.ಟನ್
6. ಎಸ್.ಬಿಂಗಿಪುರ – 500 ಮೆ.ಟನ್

ಮೇಲ್ಕಂಡ ಸ್ಥಳಗಳ ಪೈಕಿ ಚೀಮಸಂದ್ರ ಘಟಕವನ್ನು ಮುಚ್ಚಲಾಗಿದ್ದು, ಮಾವಳ್ಳಿಪುರ ಘಟಕವನ್ನು ಸಾರ್ವಜನಿಕರ ಪ್ರತಿಭಟನೆ ಎದುರಾದ ಹಿನ್ನಲೆಯಲ್ಲಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಆದೇಶದಂತೆ ಸ್ಥಗಿತಗೊಳಿಸಲಾಗಿದೆ. ಉಳಿದಂತಹ ಘಟಕಗಳು ಕಾರ್ಯನಿರ್ವಹಿಸುತ್ತಿದ್ದು, ಬೆಂಗಳೂರು ನಗರದಲ್ಲಿ ಗಣನೀಯ ಪ್ರಮಾಣದಲ್ಲಿ ಉತ್ಪತ್ತಿಯಾಗುತ್ತಿರುವ ಘನತ್ಯಾಜ್ಯವನ್ನು ನಿರ್ವಹಿಸಬೇಕಾಗಿರುವುದರಿಂದ, ಮೇಲ್ಕಂಡ ಘಟಕಗಳಲ್ಲಿ ಒತ್ತಡ ಜಾಸ್ತಿಯಾಗಿರುತ್ತದೆ.

ಈ ನಿಟ್ಟಿನಲ್ಲಿ ಕೆಳಕಂಡ ಸ್ಥಳಗಳಲ್ಲಿ ಹೊಸದಾಗಿ ಘನತ್ಯಾಜ್ಯ ನಿರ್ವಹಣೆ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಈ ಸಂಬಂಧ ಗುತ್ತಿಗೆದಾರರೊಂದಿಗೆ ಕರಾರು ಒಪ್ಪಂದ ಮಾಡಿಕೊಳ್ಳಲಾಗಿದೆ.

1. ಸುಬ್ಬರಾಯನಪಾಳ್ಯ-750 ಮೆ.ಟನ್ (ಮೆ॥ ಹಂಜೀರ್)
2. ಮಂಡೂರು - 1000 ಮೆ.ಟನ್ (ಮೆ॥ ಆರ್ಗ್ಯಾನಿಕ್ ವೇಸ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್)
3. ಗೊರೂರು ಗ್ರಾಮ, ಮಾಗಡಿ ತಾಲ್ಲೂಕು - 600 ಮೆ.ಟನ್ (ಮೆ॥ ಸತಾರಂ ಎಂಟರ್‌ಪ್ರೈಸಸ್)

ಉಳಿದಂತೆ ಕನ್ನಹಳ್ಳಿಯಲ್ಲಿ 500 ಮೆ.ಟನ್ ಕಸ ವಿಲೇವಾರಿ ಘಟಕ ಸ್ಥಾಪಿಸಲು ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ.

ಘನತ್ಯಾಜ್ಯ ವಿಲೇವಾರಿಗೆ ಸಂಬಂಧಿಸಿದಂತೆ, ಬೆಂಗಳೂರು ನಗರದಲ್ಲಿ ಇತ್ತೀಚೆಗೆ ತಲೆದೋರಿರುವ ಸಮಸ್ಯೆಯನ್ನು ಮುಂದಿನ ದಿನಗಳಲ್ಲಿ ತಡೆಗಟ್ಟುವ ಉದ್ದೇಶದಿಂದ ಪರ್ಯಾಯ ಕ್ರಮವಾಗಿ ಹೆಚ್ಚು ಘಟಕಗಳನ್ನು ಸ್ಥಾಪಿಸಬೇಕಾದ ಅನಿವಾರ್ಯತೆಯಿದ್ದು, **Long Term** ಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಅವಶ್ಯಕತೆಯಿರುವುದರಿಂದ ಹೆಚ್ಚುವರಿ ಘಟಕಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

ಈ ನಿಟ್ಟಿನಲ್ಲಿ ಪಾಲಿಕೆಗೆ ಯಾವುದೇ ರೀತಿಯ ಆರ್ಥಿಕ ಹೊರೆಯಾಗದಂತೆ ಸ್ವಂತ ಜಾಗ ಹೊಂದಿರುವವರಿಂದ ಘನತ್ಯಾಜ್ಯ ನಿರ್ವಹಣೆ ಘಟಕವನ್ನು ಸ್ಥಾಪಿಸಲು ಆಸಕ್ತಿ ಇರುವವರಿಂದ ದಿನಾಂಕ:08-02-2013 ರಂದು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿತ್ತು. ಸದರಿ ಟೆಂಡರ್‌ನಲ್ಲಿ **M/s. MSGP Infra tech Private Limited** ರವರು ಭಾಗವಹಿಸಿರುತ್ತಾರೆ.

ಬೆಂಗಳೂರು ನಗರದ ಇತ್ತೀಚಿನ ಸಮಸ್ಯೆಯನ್ನು ಗಮನದಲ್ಲಿಟ್ಟುಕೊಂಡು ಏಕೈಕ ಬಿಡ್ಡುದಾರರಾದ **M/s. MSGP Infra tech Private Limited** ರವರ ಟೆಂಡರ್‌ನ್ನು ಪರಿಗಣಿಸಲು ಉದ್ದೇಶಿಸಲಾಗಿದ್ದು, ಇವರ ತಾಂತ್ರಿಕ ಬಿಡ್ಡನ್ನು ಪರಿಶೀಲಿಸಲು ಕೆಳಕಂಡ ಅಧಿಕಾರಿಗಳ ತಂಡವನ್ನು ರಚಿಸಲಾಯಿತು.

| | | |
|---|---|---|
| 1 | ವಿಶೇಷ ಆಯುಕ್ತರು (ಯೋಜನೆ ಮತ್ತು ಹಣಕಾಸು) | ಅಧ್ಯಕ್ಷರು |
| 2 | ಅಪರ ಆಯುಕ್ತರು (ಘ.ತ್ಯಾ.ನಿ) | ಸದಸ್ಯರು |
| 3 | ಮುಖ್ಯ ಅಭಿಯಂತರರು, ಘ.ತ್ಯಾ.ನಿ-1 | ಸದಸ್ಯರು |
| 4 | ಮುಖ್ಯ ಅಭಿಯಂತರರು, ಘ.ತ್ಯಾ.ನಿ-2 | ಸದಸ್ಯರು |
| 5 | ಮುಖ್ಯ ಅಭಿಯಂತರರು, ಘ.ತ್ಯಾ.ನಿ-3 | ಸದಸ್ಯರು |
| 6 | ಮುಖ್ಯ ಅಭಿಯಂತರರು, ಘ.ತ್ಯಾ.ನಿ-4 | ಸದಸ್ಯರು |
| 7 | ಮುಖ್ಯ ಅಭಿಯಂತರರು, ಟಿ.ವಿ.ಸಿ.ಸಿ. | ಸದಸ್ಯರು |
| 8 | ಮುಖ್ಯ ಲೆಕ್ಕಾಧಿಕಾರಿಗಳು | ಸದಸ್ಯರು |
| 9 | ಕಾನೂನು ಕೋಶದ ಮುಖ್ಯಸ್ಥರು | ಸದಸ್ಯರು |

ಮೇಲ್ಕಂಡ ಸಮಿತಿ ಸಭೆಯನ್ನು ದಿನಾಂಕ:22-03-2013 ರಂದು ನಡೆಸಲಾಗಿ, ಬೆಂಗಳೂರು ನಗರದ ಇತ್ತೀಚಿನ ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತಹ ಸಮಸ್ಯೆ ಹಾಗೂ ನ್ಯಾಯಾಲಯದಲ್ಲಿ ಹೂಡಲಾದ ದಾವೆಗಳನ್ನು ಮನದಲ್ಲಿಟ್ಟುಕೊಂಡು ಹಾಗೂ **M/s. MSGP Infra tech Private Limited** ರವರು ಈಗಾಗಲೇ ಸ್ಥಳೀಯ ಗ್ರಾಮ ಪಂಚಾಯಿತಿಯಿಂದ ಪಡೆದುಕೊಂಡಿರುವ ನಿರಾಕ್ಷೇಪಣಾ ಪತ್ರ, ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಪಡೆಯಲಾಗಿರುವ **Authorization** ಕೈಗಾರಿಕಾ ಮತ್ತು ವಾಣಿಜ್ಯ ನಿರ್ದೇಶನಾಲಯದಿಂದ ಪಡೆದಿರುವ ಒಪ್ಪಿಗೆ ಪತ್ರಗಳನ್ನೆಲ್ಲಾ ಪರಿಗಣಿಸಿ, ಸದರಿಯವರು ಸಲ್ಲಿಸಿರುವ ತಾಂತ್ರಿಕ ಪ್ರಸ್ತಾವನೆಯನ್ನು ಒಪ್ಪಿ ಆರ್ಥಿಕ ಬಿಡ್ಡನ್ನು ತೆರೆಯಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ದಿನಾಂಕ:26-03-2013 ರಂದು ಇವರ ಆರ್ಥಿಕ ಬಿಡ್ಡನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ತೆರೆಯಲಾಯಿತು. **Processing Fee/Tipping Fee** ಬಾಬ್ತಿಗಾಗಿ ಇವರು ನಮೂದಿಸಿರುವ ದರವು ಪ್ರತಿ ಟನ್‌ಗೆ ರೂ.171.00 ಗಳಾಗಿರುತ್ತದೆ. ಇದರಂತೆ ಸದರಿ ಘನತ್ಯಾಜ್ಯ ಸಂಸ್ಕರಣೆಗೆ ತಗಲುವ ವೆಚ್ಚದ ವಿವರಗಳು ಕೆಳಕಂಡಂತಿವೆ.

1. ಸಂಸ್ಕರಣಾ ಶುಲ್ಕ **(Processing Fee/Tipping fee) =** ರೂ.171/- ಪ್ರತಿ ಮೆಟ್ರಿಕ್ ಟನ್‌ಗೆ
2. ಪ್ರತಿ ದಿನದ ಘನತ್ಯಾಜ್ಯ ಸಂಸ್ಕರಣೆ = 500 ಮೆ.ಟನ್
3. ಪ್ರತಿದಿನದ 500 ಮೆ.ಟನ್ ಘನತ್ಯಾಜ್ಯ ಸಂಸ್ಕರಣಾ ವೆಚ್ಚ = ರೂ.85,500/-
4. ಪ್ರತಿ ತಿಂಗಳ ಘನತ್ಯಾಜ್ಯ ಸಂಸ್ಕರಣಾ ವೆಚ್ಚ = ರೂ.25,65,000/-
5. ಪ್ರತಿ ವಾರ್ಷಿಕ ಘನತ್ಯಾಜ್ಯ ಸಂಸ್ಕರಣಾ ವೆಚ್ಚ = ರೂ.3,12,07,500/-

ಸದರಿ ಟೆಂಡರ್ ಅನ್ನು 20 ವರ್ಷಗಳ ಅವಧಿಗೆ ಕರೆಯಲಾಗಿದ್ದು, 20 ವರ್ಷಗಳ ನಂತರ 15 ವರ್ಷಗಳ ಅವಧಿಗೆ Post Closure ನಿರ್ವಹಣೆಯನ್ನು ಯಶಸ್ವಿ ಬಿಡ್ಡುದಾರರಾದ **M/s. MSGP Infra tech Private Limited** ರವರು ನಿರ್ವಹಿಸಬೇಕಾಗಿರುತ್ತದೆ. ಇವರು ನಮೂದಿಸಿರುವ ದರವನ್ನು ಪ್ರತಿ ಮೂರು ವರ್ಷಗಳಿಗೊಮ್ಮೆ ಶೇ.10 ರಷ್ಟು ಹೆಚ್ಚಿಸಲು ಅವಕಾಶ ಕಲ್ಪಿಸಲಾಗಿದೆ. ಇವರಿಗೆ ವರ್ಷವಾರು ಪಾವತಿಸಬೇಕಾಗಿರುವ ಮೊತ್ತದ ವಿವರವು ಕೆಳಕಂಡಂತಿರುತ್ತದೆ.

..........3

| Sl. No. | Particulars | Amount in Rs. | Cumulative amount in Rs. |
|---|---|---|---|
| 1 | 1st Year | 3,12,07,500 | 3,12,07,500 |
| 2 | 2nd Year | 3,12,07,500 | 6,24,15,000 |
| 3 | 3rd Year | 3,12,07,500 | 9,36,22,500 |
| 4 | 4th Year | 3,43,28,250 | 12,79,50,750 |
| 5 | 5th Year | 3,43,28,250 | 16,22,79,000 |
| 6 | 6th Year | 3,43,28,250 | 19,66,07,250 |
| 7 | 7th Year | 3,74,49,000 | 23,40,56,250 |
| 8 | 8th Year | 3,74,49,000 | 27,15,05,250 |
| 9 | 9th Year | 3,74,49,000 | 30,89,54,250 |
| 10 | 10th Year | 4,05,69,750 | 34,95,24,000 |
| 11 | 11th Year | 4,05,69,750 | 39,00,93,750 |
| 12 | 12th Year | 4,05,69,750 | 43,06,63,500 |
| 13 | 13th Year | 4,36,90,500 | 47,43,54,000 |
| 14 | 14th Year | 4,36,90,500 | 51,80,44,500 |
| 15 | 15th Year | 4,36,90,500 | 56,17,35,000 |
| 16 | 16th Year | 4,68,11,250 | 60,85,46,250 |
| 17 | 17th Year | 4,68,11,250 | 65,53,57,500 |
| 18 | 18th Year | 4,68,11,250 | 70,21,68,750 |
| 19 | 19th Year | 4,99,32,000 | 75,21,00,750 |
| 20 | 20th Year | 4,99,32,000 | 80,20,32,750 |

ಇವರು ಸ್ಥಾಪಿಸುವ ಘಟಕಕ್ಕೆ ಘನತ್ಯಾಜ್ಯವನ್ನು ಒದಗಿಸುವ ಜವಾಬ್ದಾರಿ ಪಾಲಿಕೆಯದ್ದಾಗಿರುತ್ತದೆ ಹಾಗೂ ಇದಕ್ಕೆ ತಗಲುವ ವೆಚ್ಚವನ್ನು ಪಾಲಿಕೆ ವತಿಯಿಂದಲೇ ಭರಿಸಬೇಕಾಗಿದೆ.

**M/s. MSGP Infra tech Private Limited** ಸಂಸ್ಥೆಯವರು ಸ್ಥಾಪಿಸಬೇಕಿರುವ ಘಟಕದಲ್ಲಿ ಕೆಳಕಂಡಂತೆ ನಿಬಂಧನೆಗಳನ್ನು ಪಾಲಿಸಬೇಕಾಗಿರುತ್ತದೆ.

1. ಎಂ.ಎಸ್.ಡಬ್ಲ್ಯೂ 2000 ನಿಯಮಾವಳಿಗಳ ರೀತ್ಯಾ ಹಾಗೂ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯವರು ವಿಧಿಸುವ ನಿಯಮಾವಳಿಗಳ ರೀತ್ಯಾ ಘನತ್ಯಾಜ್ಯ ನಿರ್ವಹಣೆಯನ್ನು ಸಂಸ್ಕರಣೆ ಮತ್ತು / ಅಥವಾ ನಿರ್ವಹಣೆ ಮಾಡಬೇಕಾಗಿರುತ್ತದೆ.
2. ಲ್ಯಾಂಡ್‌ಫಿಲ್‌ನಲ್ಲಿ ತುಂಬುವ **Inerts** ನ ಪ್ರಮಾಣವು ಶೇ.15ಕ್ಕೆ ಮೀರಬಾರದು.
3. ವಾಸನೆ, ಲೀಚೆಟ್ ಹಾಗೂ ಇದರಿಂದಾಗಿ ನೊಣ, ಸೊಳ್ಳೆಗಳ ಹಾವಳಿ ನಿಯಂತ್ರಿಸಲು ಸೂಕ್ತ ಕ್ರಮ ಕೈಗೊಳ್ಳುವುದು ಮತ್ತು **Closed shed** ನಲ್ಲಿ ನಿರ್ವಹಣೆ ಮಾಡುವುದು.
4. ತ್ಯಾಜ್ಯ ಸಂಸ್ಕರಣೆಯು ತೃಪ್ತಿಕರವಾಗಿರದಿದ್ದಲ್ಲಿ ಸೂಕ್ತ ದಂಡ ವಿಧಿಸುವುದು.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸ್ವಂತ ಜಾಗ ಹೊಂದಿರುವ ಆಸಕ್ತದಾರರಿಂದ ಘನತ್ಯಾಜ್ಯ ನಿರ್ವಹಣೆ ಘಟಕ ಸ್ಥಾಪನೆಯ ಪ್ರಸ್ತಾವನೆಯ ಬಗ್ಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:23-07-2013ರ ಟಿಪ್ಪಣಿ.

1. ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಭಾಗವಹಿಸಿದ್ದ ಏಕೈಕ ಬಿಡ್ಡುದಾರರಾದ **M/s. MSGP Infra tech Private Limited** ಸಂಸ್ಥೆಯು ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬೆಳವಂಗಲ ಹೋಬಳಿ, ಭಕ್ತರಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಿಗರನಹಳ್ಳಿ ಗ್ರಾಮದ ಸರ್ವೆ ನಂ.1, 2, 3, 7 & 11 ಹಾಗೂ 8/ಪಿ2 ಗಳಲ್ಲಿನ ತಮ್ಮ ಸ್ವಂತ ಜಾಗದಲ್ಲಿ ಪ್ರತಿದಿನ 500 ಮೆ.ಟನ್ ಘನತ್ಯಾಜ್ಯ ಸಂಸ್ಕರಿಸುವ ಸಾಮರ್ಥ್ಯದ ಘನತ್ಯಾಜ್ಯ ನಿರ್ವಹಣೆ/ಸಂಸ್ಕರಣೆ ಘಟಕವನ್ನು ಸ್ಥಾಪಿಸಿ 20 ವರ್ಷಗಳ ಅವಧಿಗೆ ನಿರ್ವಹಿಸಲು ಹಾಗೂ ನಂತರದ 15 ವರ್ಷಗಳ **Post Closure** ಅವಧಿಯಲ್ಲಿ ನಿರ್ವಹಣೆ ಮಾಡಲು ಅನುಮೋದನೆ.

2. ಸದರಿ **M/s. MSGP Infra tech Private Limited** ಸಂಸ್ಥೆಗೆ ಪಾಲಿಕೆಯಿಂದ ಪ್ರತಿದಿನ 500 ಮೆ.ಟನ್ ಘನತ್ಯಾಜ್ಯವನ್ನು ಸಾಗಾಣಿಕೆ ಮಾಡಿ ಒದಗಿಸಲು ಅನುಮೋದನೆ.
3. ಸದರಿ **M/s. MSGP Infra tech Private Limited** ಸಂಸ್ಥೆಗೆ ಪಾಲಿಕೆಯಿಂದ ಒದಗಿಸುವ ಪ್ರತಿ ಮೆ.ಟನ್ ಘನತ್ಯಾಜ್ಯಕ್ಕೆ ರೂ.171.00 ಗಳ ಸಂಸ್ಕರಣಾ ಶುಲ್ಕವನ್ನು ಪಾವತಿಸಲು ಅನುಮೋದನೆ.
4. ಸದರಿ **M/s. MSGP Infra tech Private Limited** ಸಂಸ್ಥೆಗೆ ಪಾವತಿಸುವ ಸಂಸ್ಕರಣಾ ಶುಲ್ಕವನ್ನು ಪ್ರತಿ ಮೂರು ವರ್ಷಕ್ಕೊಮ್ಮೆ ಶೇ.10 ರಷ್ಟು ಹೆಚ್ಚಿಸಿ ತಃಖ್ತೆಯಲ್ಲಿರುವಂತೆ ಪಾವತಿಸಲು ಅನುಮೋದನೆ.

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

"ಆಯುಕ್ತರವರ ದಿನಾಂಕ:23-07-2013ರ ಟಿಪ್ಪಣಿಯನ್ನು ಒಪ್ಪುವುದು".

ಶ್ರೀ. ಬಿ.ಸೋಮಶೇಖರ್ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಆಯುಕ್ತರವರ ದಿನಾಂಕ:23-07-2013ರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

## ದಿನಾಂಕ:31-07-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ನಿರ್ಣಯ

**ವಿಷಯದ ಸಂಖ್ಯೆ : 11 / 2013-14**

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಪಾಲಿಕೆಯ ಸಭೆ ಮತ್ತು ಸ್ಥಾಯಿ ಸಮಿತಿಗಳಲ್ಲಿ ತೀರ್ಮಾನಕ್ಕಾಗಿ ಬಾಕಿ ಇರುವ ಕಡತಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಷಯಗಳ ಸಭೆಯನ್ನು ದಿನಾಂಕ:05-08-2013 ರಂದು ಕರೆಯಲು ಮಾನ್ಯ ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದು.

ಶ್ರೀ. ಬಿ.ಸೋಮಶೇಖರ್ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಪಾಲಿಕೆಯ ಸಭೆ ಮತ್ತು ಸ್ಥಾಯಿ ಸಮಿತಿಗಳಲ್ಲಿ ತೀರ್ಮಾನಕ್ಕಾಗಿ ಬಾಕಿ ಇರುವ ಕಡತಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿಷಯಗಳ ಸಭೆಯನ್ನು ದಿನಾಂಕ:05-08-2013 ರಂದು ಕರೆಯಲು ಮಾನ್ಯ ಆಯುಕ್ತರು ಅಗತ್ಯ ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಲಾಯಿತು".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-07-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಮಂಡಿಸಲಾದ ಸಂತಾಪ ಸೂಚಕ ನಿರ್ಣಯ

## ವಿಷಯದ ಸಂಖ್ಯೆ : 13 / 2013-14

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

1944-95ನೇ ಸಾಲಿನ ಬೆಂಗಳೂರು ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರಾಗಿದ್ದ ಶ್ರೀ. ಜಿ.ಕುಪ್ಪಸ್ವಾಮಿ ರವರು ದಿನಾಂಕ:28-06-2013 ರಂದು ದೈವಾಧೀನರಾದರೆಂದು ಸಭೆಗೆ ತಿಳಿಸಲು ದುಃಖವಾಗುತ್ತದೆ. ದಿವಂಗತರು ಬೆಂಗಳೂರು ನಗರದ ಅಭಿವೃದ್ಧಿಗೆ ಶ್ರಮಿಸಿದವರಾಗಿದ್ದು, ಸಾರ್ವಜನಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ಜನಾನುರಾಗಿಗಳಾಗಿದ್ದರು. ದಿವಂಗತರು ಸಲ್ಲಿಸಿರುವ ಸೇವೆಯನ್ನು ನಾವು ಇಂದು ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

**ನಿರ್ಣಯ:** "1944-95ನೇ ಸಾಲಿನ ಬೆಂಗಳೂರು ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರಾಗಿದ್ದ ಶ್ರೀ. ಜಿ.ಕುಪ್ಪಸ್ವಾಮಿ ರವರು ದಿನಾಂಕ:28-06-2013 ರಂದು ದೈವಾಧೀನರಾದರೆಂದು ಸಭೆಗೆ ತಿಳಿಸಲು ದುಃಖವಾಗುತ್ತದೆ. ದಿವಂಗತರು ಬೆಂಗಳೂರು ನಗರದ ಅಭಿವೃದ್ಧಿಗೆ ಶ್ರಮಿಸಿದವರಾಗಿದ್ದು, ಸಾರ್ವಜನಿಕ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ಜನಾನುರಾಗಿಗಳಾಗಿದ್ದರು. ದಿವಂಗತರು ಸಲ್ಲಿಸಿರುವ ಸೇವೆಯನ್ನು ನಾವು ಇಂದು ಸ್ಮರಿಸಬೇಕಾಗಿದ್ದು, ದಿವಂಗತರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದಾಗಿ ಅವರ ಕುಟುಂಬ ವರ್ಗದವರಿಗೆ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ಸಭೆಯು ಪ್ರಾರ್ಥಿಸುತ್ತದೆ".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು

# ದಿನಾಂಕ:29-07-2013 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ಮಂಡಿಸಲಾದ ಸಂತಾಪ ಸೂಚಕ ನಿರ್ಣಯ

## ವಿಷಯದ ಸಂಖ್ಯೆ : 14[illegible] / 2013-14

ಶ್ರೀ. ಎನ್.ನಾಗರಾಜು, ಆಡಳಿತ ಪಕ್ಷದ ನಾಯಕರು ಈ ಕೆಳಕಂಡ ನಿರ್ಣಯವನ್ನು ಮಂಡಿಸಿದರು.

ಕರ್ನಾಟಕದ ಮಾಜಿ ರಾಜ್ಯಪಾಲರಾಗಿದ್ದ ಶ್ರೀ. ಖುರ್ಷಿದ್ ಆಲಂಖಾನ್‌ರವರು ದೈವಾಧೀನರಾದ ವಿಷಯವನ್ನು ಸಭೆಗೆ ತಿಳಿಸಲು ದುಃಖವಾಗುತ್ತದೆ. ಶ್ರೀಯುತರು ರಾಜ್ಯ ಸಭಾ ಸದಸ್ಯರಾಗಿ, ಲೋಕಸಭಾ ಸದಸ್ಯರಾಗಿ, ಕೇಂದ್ರ ಸಚಿವ ಸಂಪುಟದಲ್ಲಿ ವಿದೇಶಾಂಗ ಸಚಿವರಾಗಿ ಉತ್ತಮ ಸೇವೆಯನ್ನು ಸಲ್ಲಿಸಿದ್ದರು. ಶ್ರೀಯುತರು ಸರಳ ವ್ಯಕ್ತಿತ್ವವನ್ನು ರೂಢಿಸಿಕೊಂಡಿದ್ದು, ಸಜ್ಜನಿಕೆಯ ವ್ಯಕ್ತಿಯಾಗಿದ್ದರು. ಶ್ರೀಯುತರು ಕರ್ನಾಟಕ ಹಾಗೂ ಗೋವಾ ರಾಜ್ಯಪಾಲರಾಗಿ ಸಲ್ಲಿಸಿದ ಸೇವೆಯು ಸ್ಮರಣೀಯ. ದೇಶವು ಇಂದು ಒಬ್ಬ ಧೀಮಂತ ಹಾಗೂ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ. ಶ್ರೀಯುತರು ರಾಜ್ಯಕ್ಕೆ ಹಾಗೂ ರಾಷ್ಟ್ರಕ್ಕೆ ಸಲ್ಲಿಸಿರುವ ಸೇವೆಯನ್ನು ಇಂದು ನಾವು ಸ್ಮರಿಸಬೇಕಾಗಿದ್ದು, ಶ್ರೀಯುತರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದ ಅವರ ಕುಟುಂಬದವರಿಗೆ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಶ್ರೀ. ಗಂಗಭೈರಯ್ಯ ರವರು ಶ್ರೀ. ಎನ್.ನಾಗರಾಜು ರವರು ಮಂಡಿಸಿದ ನಿರ್ಣಯವನ್ನು ಅನುಮೋದಿಸಿದರು.

ಮಹಾಪೌರರು ಮೇಲ್ಕಂಡ ನಿರ್ಣಯವನ್ನು ಮತಕ್ಕೆ ಹಾಕಲಾಗಿ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

<u>ನಿರ್ಣಯ:</u> "ಕರ್ನಾಟಕದ ಮಾಜಿ ರಾಜ್ಯಪಾಲರಾಗಿದ್ದ ಶ್ರೀ. ಖುರ್ಷಿದ್ ಆಲಂಖಾನ್‌ರವರು ದೈವಾಧೀನರಾದ ವಿಷಯವನ್ನು ಸಭೆಗೆ ತಿಳಿಸಲು ದುಃಖವಾಗುತ್ತದೆ. ಶ್ರೀಯುತರು ರಾಜ್ಯ ಸಭಾ ಸದಸ್ಯರಾಗಿ, ಲೋಕಸಭಾ ಸದಸ್ಯರಾಗಿ, ಕೇಂದ್ರ ಸಚಿವ ಸಂಪುಟದಲ್ಲಿ ವಿದೇಶಾಂಗ ಸಚಿವರಾಗಿ ಉತ್ತಮ ಸೇವೆಯನ್ನು ಸಲ್ಲಿಸಿದ್ದರು. ಶ್ರೀಯುತರು ಸರಳ ವ್ಯಕ್ತಿತ್ವವನ್ನು ರೂಢಿಸಿಕೊಂಡಿದ್ದು, ಸಜ್ಜನಿಕೆಯ ವ್ಯಕ್ತಿಯಾಗಿದ್ದರು. ಶ್ರೀಯುತರು ಕರ್ನಾಟಕ ಹಾಗೂ ಗೋವಾ ರಾಜ್ಯಪಾಲರಾಗಿ ಸಲ್ಲಿಸಿದ ಸೇವೆಯು ಸ್ಮರಣೀಯ. ದೇಶವು ಇಂದು ಒಬ್ಬ ಧೀಮಂತ ಹಾಗೂ ಹಿರಿಯ ರಾಜಕಾರಣಿಯನ್ನು ಕಳೆದುಕೊಂಡಂತಾಗಿದೆ. ಶ್ರೀಯುತರು ರಾಜ್ಯಕ್ಕೆ ಹಾಗೂ ರಾಷ್ಟ್ರಕ್ಕೆ ಸಲ್ಲಿಸಿರುವ ಸೇವೆಯನ್ನು ಇಂದು ನಾವು ಸ್ಮರಿಸಬೇಕಾಗಿದ್ದು, ಶ್ರೀಯುತರ ಆತ್ಮಕ್ಕೆ ಚಿರಶಾಂತಿ ಲಭಿಸಲೆಂದು ಹಾಗೂ ದಿವಂಗತರ ಅಗಲಿಕೆಯಿಂದ ಅವರ ಕುಟುಂಬದವರಿಗೆ ಉಂಟಾಗಿರುವ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ಸಭೆಯು ಪ್ರಾರ್ಥಿಸುತ್ತದೆ".

(ಡಿ. ವೆಂಕಟೇಶ್ ಮೂರ್ತಿ)
ಮಹಾಪೌರರು